ವಿವರಿಸಿ ನಮ್ಮ ಕೆಲಸಕ್ಕೆ ಅವರ ಅನುಮತಿ ಪಡೆದೆವು.'

'ಹಾಗಾದ್ರೆ ನೀವು?... ಬಾಪರೆ!'

'ಕರೆಕ್ಟ್, ನೀನು ಯೋಚಿಸುತ್ತಿರುವುದು ನಿಜ. ಮರುದಿನ ಮೀತಾಳ ಆರೋಗ್ಯ ಇನ್ನಷ್ಟು ಕೆಟ್ಟಿತ್ತು. ಅವಳ ಮೆದುಳು ಯಾವುದೇ ಕೃತಕ ಯಂತ್ರಗಳೊಂದಿಗೆ ಸಹಕರಿಸುತ್ತಿಲ್ಲ. ಹಾಗಾಗಿ ಅವಳು ಕೆಲವೇ ಗಂಟೆಗಳವರೆಗೆ ಬದುಕಿರುತ್ತಾಳೆ ಅನ್ನುವುದು ಸುಮಾರು ಏಳು ಗಂಟೆಗೆ ತಿಳಿಯಿತು. ಅವಳ ಹೃದಯ ಸಂಪೂರ್ಣವಾಗಿ ನಿಂತುಹೋಗುವ ಮುನ್ನ ನಾವು ಅವಳ ಸ್ವರಯಂತ್ರದ ಒಂದು ಸಣ್ಣ ಚೂರನ್ನು ತೆಗೆದುಕೊಂಡೆವು. ನಾವು ಮೊದಲೇ ಎಲ್ಲ ಉಪಕರಣಗಳನ್ನು ತೆಗೆದುಕೊಂಡು ಹೋಗಿದ್ದರಿಂದ ಆ ಸಣ್ಣ ಚೂರನ್ನು ರಾಸಾಯನಿಕದಲ್ಲಿಟ್ಟು ಸಂಸ್ಥೆಗೆ ತರಲು ಸಾಧ್ಯವಾಯಿತು. ಆ ಡಾಕ್ಟರ್ ಕೂಡ ಮೀತಾಳ ಬಹಳ ದೊಡ್ಡ ಅಭಿಮಾನಿಯಾಗಿರುವುದರಿಂದ ಅವನು ನಮ್ಮ ಕೆಲಸಕ್ಕೆ ಸಮ್ಮತಿ ಕೊಟ್ಟ.'

ಮಾತನಾಡುತ್ತಲೇ ಶುಭಂಕರ್ ಸ್ವಲ್ಪ ಮೌನವಾದ.

'ನಿಮ್ಮ ಪ್ರಯೋಗ ಎಷ್ಟು ಯಶಸ್ವಿಯಾಗಿದೆ, ಯಾವ ಹಂತದಲ್ಲಿದೆ'? ವಿದ್ಯಾ ಅಧೀರಳಾಗಿ ಕೇಳಿದಳು.

'ಅದನ್ನೇ ಹೇಳಲು ಪ್ರಯತ್ನಿಸುತ್ತಿದ್ದೇನೆ. ಸಾತ್ವಿಕ ಆ ಸ್ವರಯಂತ್ರದ ಚೂರಿನ ಅಂಗಾಂಶಗಳನ್ನು ನೂರು ಭಾಗಗಳಲ್ಲಿ ಕತ್ತರಿಸಿ ಅಂಗಾಂಶ ಕೃಷಿ(ಟಿಶ್ಯೂ ಕಲ್ಚರ್) ತಂತ್ರಜ್ಞಾನವನ್ನು ಉಪಯೋಗಿಸಿ ಅವುಗಳ ಸ್ವರಯಂತ್ರಗಳನ್ನು ತಯಾರಿಸಲು ಪ್ರಯತ್ನಿಸಿದ. ಅವುಗಳಲ್ಲಿ ನಾಲ್ಕೈದು ಚೂರುಗಳು ಮಾತ್ರ ಸ್ವರಯಂತ್ರವಾಗಿ ಮಾರ್ಪಾಟಾದವು. ಉಳಿದ ಅಂಗಾಂಶಗಳು ಹಲವಾರು ಕಾರಣಗಳಿಂದ ಬೆಳೆಯದೆ ನಾಶವಾದವು.'

'ಅಂದರೆ ಮೀತಾಳ ಸ್ವರಯಂತ್ರದ ಚೂರಿನಿಂದ ಸಾತ್ವಿಕ ಸಂಪೂರ್ಣವಾಗಿ ಹೊಸತಾದ ಸ್ವರಯಂತ್ರ ತಯಾರಿಸಿದನೆ?'

'ಹೌದು, ಅದರಲ್ಲಿ ಒಂದಂತೂ ತುಂಬಾ ಪರ್ಫೆಕ್ಟ್ ಆಗಿದೆ.'

'ಈಗ ಅದನ್ನ ಏನು ಮಾಡಬೇಕು ಅಂದುಕೊಂಡಿದ್ದೀರಿ?'

'ಅದರ ಬಗ್ಗೆಯೇ ನಿನ್ನ ಜೊತೆ ಮಾತಾಡುವುದಿದೆ.'

'ಹಂ, ಹೇಳಿ.'

'ಈಗ ಈ ಸ್ವರಯಂತ್ರವನ್ನು ಒಬ್ಬ ಹುಡುಗಿಯ ಗಂಟಲಲ್ಲಿ ಕಸಿ ಮಾಡಬೇಕಿದೆ' ಎಂದು ಹೇಳಿ ಅವನು ಬೇಕೆಂದೇ ಮಲಗುವ ಕೋಣೆಯಲ್ಲಿ ಬಗ್ಗಿ ನೋಡಿದ. ಅವನು ಹಾಗೆ ನೋಡಿದುದರ ಹಿಂದಿನ ಅರ್ಥ ವಿದ್ಯಾಗೆ ತಿಳಿದಾಗ ಆಕೆಯ ಹೃದಯ ಜೋರಾಗಿ ಬಡಿದುಕೊಳ್ಳಲಾರಂಭಿಸಿತು. ಮೈಯೆಲ್ಲ ಬೆವರಿ ಹೆದರುತ್ತಲೆ, 'ಅಂದ್ರೆ? ನೀವು ಏನು ಹೇಳಬೇಕು ಅಂದುಕೊಂಡಿದ್ದೀರಾ?' ಅಂದಳು.

'ಯಾಕಿಷ್ಟು ಅಪ್ಸೆಟ್ ಆಗ್ತಿ? ಸಾತ್ವಿಕನಿಗೆ ಒಬ್ಬನೇ ಮಗ, ಹಾಗಾಗಿ ಅವನದನ್ನು ಉಪಯೋಗಿಸಲಾರ. ಹಾಗೆ ಸ್ವರಯಂತ್ರವನ್ನು ತಯಾರಿಸುವ ಕಲ್ಪನೆ ನನ್ನದಾದ್ದರಿಂದ ಮಿತಾಲಿಯ ಮೇಲೆ ಅದನ್ನು ಪ್ರಯೋಗಿಸಬಹುದೆ? ಎಂದವನು ನನ್ನನ್ನೇ ಕೇಳಿದ. ಒಂದೋ ಮಿತಾಲಿಯ ವಯಸ್ಸು, ದೇಹ ಎರಡೂ ಎಳೆಯದು. ಹಾಗಾಗಿ ಚೆನ್ನಾಗಿ ಕಸಿ ಮಾಡಬಹುದು.'

'ಆದರೆ, ಇದರಲ್ಲಿ ಬಹಳ ಅಪಾಯವಿದೆ, ಆಪರೇಶನ್ ಮಾಡುವಾಗ ಏನಾದರೂ ಹೆಚ್ಚು ಕಡಿಮೆಯಾದರೆ?... ಅವಳ ಮಾತೇ ನಿಂತು ಹೋದರೆ?... ಬೇಡ, ಮಿತಾಲಿ ನನ್ನ ಒಬ್ಬಳೇ ಮಗಳು.